# ಅಲ್ಲಮನ ವಚನದ ವಿವೇಚನೆ

ಎನ್. ಎಸ್. ಸತೀಶ್

ಪ್ರಾಚಾರ್ಯರು, ಶೇಷಾದ್ರಿಪುರಂ ಸಂಜೆ ಕಾಲೇಜು, ಬೆಂಗಳೂರು.

**Received: 20/10/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289593**

## ABSTRACT:

ಅಲ್ಲಮ ಈ ವಚನದಲ್ಲಿ ಮುಸುರೆ ಹಾಗು ನೊಣವನ್ನು ಉಪಮೆ ನೀಡುವುದರ ಮೂಲಕ ವಿಷಯಾಸೆಗಳನ್ನು ಮುಸುರೆಯೆಂದು ಸಾಮಾನ್ಯ ಮನುಷ್ಯನ ಮನಸ್ಸನ್ನು ನೊಣವೆಂದು ಹೇಳಿದ್ದಾನೆ.

ಮುಸುರೆ ಅಲ್ಪಾವಧಿಯದ್ದಾಗಿದ್ದು ಸ್ವಲ್ಪ ಸಮಯದ ಅನಂತರ ಕೊಳೆತು ನಾರುತ್ತದೆ ಅಂತೆಯೇ ವಿಷಯಾಸಕ್ತಿಗಳು ಆ ಕ್ಷಣಕ್ಕೆ ಸಂತಸವನ್ನು ತಂದು ಕೊಟ್ಟರೂ ದೀರ್ಘಾವಧಿಯಲ್ಲಿ ತನ್ನ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳುತ್ತಾ, ಚಿತ್ತ ವಿಕೃತಿಗೆ ಒಳಗಾಗುವುದಲ್ಲದೆ ಅವನು ತನ್ನ ವ್ಯಕ್ತಿತ್ವ ನಾರುವಂತೆ ಮಾಡಿಕೊಳ್ಳುತ್ತಾನೆ. ಇನ್ನು ಮತ್ತೊಂದು ಆಯಾಮವನ್ನು ನೋಡುವುದಾದರೆ ಮುಸುರೆಯ ಮಡಕೆ ಮನುಷ್ಯನ ಲೋಭತನದ ಕ್ರೋಢೀಕರಣ ಇದು ಆರೋಗ್ಯಕರ ಸಮಾಜಕ್ಕೆ ಮಾರಕವಾಗುತ್ತದೆ. ನೊಣ ಈ ಕ್ರೋಢೀಕರಣವನ್ನು ಹರಡುವ ಸಾಂಕ್ರಾಮಿಕ ರೋಗದ ಮನೋಭಾವದಂತೆ ಕಾಣುತ್ತದೆ.

ನೊಣದ ಸ್ವಭಾವದಲ್ಲಿನ ಚಂಚಲತೆ, ಪಶುವಿನಲ್ಲಿರುವ ಅಲ್ಪಮತಿ ಸಾಮಾನ್ಯ ಮನುಷ್ಯನಲ್ಲಿ ಪ್ರಚೋದಿತವಾಗುತ್ತಿರುತ್ತದೆ. ವಚನದ ಕೊನೆಯ ಸಾಲಿನಲ್ಲಿ ಅಲ್ಲಮನು ಆಧ್ಯಾತ್ಮ ಚಿಂತನೆಯ ಗುರು (ಭಗವಂತ/ಗುಹೆಶ್ವರ) ನಿಮ್ಮ ಶರಣರು ಈ ಪ್ರಚೋದನೆಗೆ ಒಳಗಾಗದ ಹಂತವನ್ನು ತಲುಪಿ ಆಶಾಪಾಶವಿರಹಿತರಾಗಿದ್ದಾರೆ ಎನ್ನುತ್ತಾನೆ. ಅಂದರೆ ಅಲ್ಲಮನು 'ಶರಣತ್ವ' ಎಂಬುದು ಮನುಷ್ಯ ಜನಾಂಗದ ಔನತ್ಯದ ಹಂತ ಎಂದು ಹೇಳುವಂತಿದೆ. ಶರಣರ ಚಿಂತನೆ ಮನುಷ್ಯ ಜನಾಂಗದ ಮುಂದುವರೆದ ಹಂತ ಎಂದು ಪ್ರತಿಪಾದಿಸುವ ದೃಷ್ಟಿಯನ್ನ ಗ್ರಹಿಸಬಹುದಾಗಿದೆ.

## KEYWORDS:

ಅಲ್ಲಮ, ಕೈಗನ್ನಡಿ, ಅನುಭವಮಂಟಪ, ಆಧ್ಯಾತ್ಮಿಕ ಚಿಂತನೆ, ಮುಸುರೆ, ಮಡಕೆ, ನೊಣ, ವಿಷಯಾಸೆ.

**ಮುಸುರೆಯ ಮಡಕೆಯ ನೊಣ ಮುತ್ತಿಕೊಂಡಿಪ್ಪಂತೆ,**
**ಕಸವುಳ್ಳ ಹೊಲದಲ್ಲಿ ಪಶುಗಳು ನೆರೆದಿಪ್ಪಂತೆ,**
**ಅನ್ನ ಉದಕ ಹೊನ್ನು ವಸ್ತ್ರವುಳ್ಳ ದೊರೆಯ ಬಾಗಿಲಲ್ಲಿ**
**ಬಹುಭಾಷೆಯ ಹಿರಿಯರುಗಳು ನೆರೆದುಕೊಂಡಿಪ್ಪರು,**
**ಗುಹೇಶ್ವರಾ, ನಿಮ್ಮ ಶರಣರು ಆಶಾಪಾಶವಿಹಿತರು.**
**–ಅಲ್ಲಮ ಪ್ರಭು**

ಹನ್ನೆರಡನೇ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖವಾದ ಕಾಲಘಟ್ಟವಾಗಿದೆ. ಅಂದಿನ ಸಾಮಾಜಿಕ ಚಿಂತನೆಗಳು ಅಲ್ಪಾವಧಿಯಲ್ಲಿ ಚಳುವಳಿಯ ಸ್ವರೂಪ ಪಡೆದು ಒಂದು ದೊಡ್ಡ ಸಾತ್ವಿಕ ಕ್ರಾಂತಿಗೆ ನಾಂದಿಯಾದದ್ದು ಇಂದಿನ ಇತಿಹಾಸ. ಜಗತ್ತಿನ ಸಾಕಷ್ಟು ದೇಶಗಳಲ್ಲಿ ಸಾಮಾಜಿಕ ಕ್ರಾಂತಿ ನಡೆದಿರುವುದು ಎಲ್ಲರಿಗೂ ತಿಳಿದಿರುವ ಅಂಶವಾಗಿದ್ದು, ಬಹುಪಾಲು ಚಳುವಳಿಗಳು ಅಂದಂದಿನ ಅಗತ್ಯತೆಗೆ ಸೀಮಿತಗೊಂಡಿದೆ. ಆದರೆ ಶರಣ ಚಳುವಳಿಯ ಚಿಂತನೆಗಳು ಹಲವಾರು ಶತಮಾನಗಳ ಅನಂತರವೂ ಪ್ರಸ್ತುತತೆಯನ್ನು ಪಡೆದಿರುವುದು ಅದರ ಮಹತ್ವಕ್ಕೆ ಹಿಡಿದ ಕೈಗನ್ನಡಿ ಎಂದರೆ ಅತಿಶಯೋಕ್ತಿಯಲ್ಲ. ವರ್ಗ ಮತ್ತು ವರ್ಣಗಳನ್ನು ಮೀರಿದ ಸಮಾನ ಮನಸ್ಕರು ಬಹುದೊಡ್ಡ ವೇದಿಕೆಯನ್ನು ನಿರ್ಮಿಸಿಕೊಂಡು, ಆ ವೇದಿಕೆಯನ್ನು ಅನುಭವ ಮಂಟಪವೆಂದು ಕರೆದು, ಆ ಅನುಭವ ಮಂಟಪದಲ್ಲಿ ತಮ್ಮ ತಮ್ಮ ಚಿಂತನೆಗಳಿಗೆ ಸಂವಾದದ ಮೂಲಕ ತಾತ್ತ್ವಿಕ ಸ್ವರೂಪವನ್ನು ನೀಡುತ್ತಿದ್ದರು. ಈ ತಾತ್ತ್ವಿಕ ರೂಪವನ್ನು ವಚನಗಳೆಂದು ಕರೆದರು.

ಈ ವಚನಗಳು ಕನ್ನಡ ಸಾಹಿತ್ಯದಲ್ಲೇ ಅಲ್ಲದೆ ವಿಶ್ವ ಸಾಹಿತ್ಯದಲ್ಲಿಯೂ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇದರ ಸ್ವರೂಪವನ್ನು ನೋಡುವುದಾದರೆ ಬಹುಪಾಲು ಅತ್ಯಂತ ಸರಳ ಹಾಗು ಅಂದಿನ ಸಾಮಾನ್ಯ ಜನರ 'ಆಡುಮಾತಿನ ಪಾರಿಭಾಷಿಕ'ದಿಂದ ಕೂಡಿದೆ. ಒಂದು ರೀತಿಯಲ್ಲಿ ಅನುಭವದಿಂದ ಮೂಡಿದ ಚಿಂತನೆಗಳ ಅಕ್ಷರ ರೂಪವೇ ವಚನಗಳು ಎಂದರೆ ತಪ್ಪಲ್ಲ. ವಚನಗಳಿಗೆ ಹೆಚ್ಚಿನ ಮಹತ್ವ ಬರಲು ಮತ್ತೊಂದು ಕಾರಣವೆಂದರೆ ಇದರ ರಚನಕಾರರು ಸಾಮಾನ್ಯ ಜನರು. ಹಾಗಾಗಿ ವಚನವು ಸರ್ವಸಮಾನತೆಯ ಪ್ರತೀಕವಾಗಿ ನಿಲ್ಲುತ್ತದೆ. ಬಹುಶಃ ಅಂದಿನ ಮಹಾಮನೆಯಲ್ಲಿ ವಾಚಿಸಿದ ಯಾರೊಬ್ಬರಿಗೂ ಮುಂದಿನ ದಿನಗಳಲ್ಲಿ ತಮ್ಮ ಮಾತುಗಳು ದೊಡ್ಡ ಸಾಹಿತ್ಯ ಪರಂಪರೆಯಾಗುತ್ತದೆ ಎಂಬುದು ತಿಳಿದಿರಲಾರದು. ಇನ್ನೊಂದು ದೃಷ್ಟಿಯಿಂದ ವಚನಗಳು ಯಾವುದೇ ಪ್ರತಿಫಲ ಹಾಗು ವೈಯಕ್ತಿಕ ಆಶಯವನ್ನು ಹೊಂದದ ರಚನೆಗಳಾಗಿವೆ ಎನ್ನಬಹುದು.

ಅಲ್ಲಮನು ಬಳ್ಳಿಗಾವೆಯಲ್ಲಿ ಜನಿಸಿ, ಮದ್ದಳೆ ಬಾರಿಸುವ ಕಲೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದು, ಅನಂತರ ಕಾಮಲತೆ/ಮಾಯಾದೇವಿಯ ಪ್ರಸಂಗದಿಂದ

ಬದುಕಿನ ದಾರಿಯನ್ನು ಬದಲಿಸುತ್ತಾ, ಅನಿಮಿಷಯ್ಯನ ಭೇಟಿಯಿಂದ ಆಧ್ಯಾತ್ಮಿಕ ಮಾರ್ಗದರ್ಶನ ಪಡೆದು, ಲೋಕ ಸಂಚಾರದ ಮೂಲಕ ಹಲವರಿಗೆ ಮಾರ್ಗದರ್ಶನ ನೀಡಿ, ಕಲ್ಯಾಣಕ್ಕೆ ಆಗಮಿಸಿ ಬಸವಣ್ಣನ ನೇತೃತ್ವದ ಆಂದೋಲನದಲ್ಲಿ ಭಾಗಿಯಾಗಿ, ಶೂನ್ಯ ಸಿಂಹಾಸನದ ನೇತೃತ್ವವಹಿಸಿ, ಕೊನೆಗೆ ಕದಳಿವನದೆಡೆಗೆ ನಡೆದನೆಂದು ತಿಳಿದುಬರುತ್ತದೆ. ಸಂಕ್ಷಿಪ್ತವಾಗಿ ಅಲ್ಲಮನ ಬದುಕಿನ ಪ್ರಮುಖ ಘಟ್ಟಗಳನ್ನು ಹೀಗೆ ಗುರುತಿಸಬಹುದು. ಇವನ ವಚನಗಳು ನಿಷ್ಠೂರ ಸತ್ಯಗಳಿಂದ ಕೂಡಿರುವುದು ಮೇಲುನೋಟಕ್ಕೆ ಕಂಡು ಬಂದರೂ ಆಧ್ಯಾತ್ಮ, ವೈಚಾರಿಕತೆಯಿಂದ ಕೂಡಿದೆ. ಬೆಡಗಿನ ವಚನಗಳನ್ನು ಅಲ್ಲಮನಷ್ಟು ಬೇರೆ ವಚನಕಾರರು ರಚಿಸಿಲ್ಲವೆಂದು ಸಂಶೋಧನೆಗಳು ತಿಳಿಸುತ್ತವೆ. 'ಗುಹೇಶ್ವರ' ಈತನ ಇಷ್ಟದೈವ ಹಾಗು ಅಂಕಿತವೂ ಆಗಿದೆ.

ಪ್ರಸ್ತುತ ಅಲ್ಲಮನ ವಚನವು ಮೇಲುನೋಟಕ್ಕೆ ಮುಸುರೆಯ ಆಸೆಗೆ ನೊಣ, ಕಸದ ಆಸೆಗೆ ಪಶು, ಹಣ ಹಾಗು ಅಧಿಕಾರದ ಆಸೆಗೆ ಜನರು ದೊರೆಯನ್ನು ಆಶ್ರಯಿಸುವರೆಂದೂ, ಆದರೆ ಶಿವಶರಣರು ಯಾವ ಆಸೆ, ಆಮಿಷಕ್ಕೆ ಒಳಗಾಗುವುದಿಲ್ಲ ಎಂಬ ಅರ್ಥವನ್ನು ಸೂಚಿಸುತ್ತದೆ. ಅಲ್ಲಮನ ಈ ವಚನವನ್ನು ಸೂಕ್ಷ್ಮತೆಯಿಂದ ಗಮನಿಸಿದರೆ ಆತನ ಚಿಂತನೆಯ ಹಲವು ಆಯಾಮಗಳನ್ನು ಗುರುತಿಸಬಹುದು ಎನಿಸುತ್ತದೆ.

**ಮುಸುರೆಯ ಮಡಕೆಯ ನೊಣ ಮುತ್ತಿಕೊಂಡಿಪ್ಪಂತೆ:**

ಈ ಸಾಲಿನಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ಅವುಗಳೆಂದರೆ ಮುಸುರೆ ಹಾಗು ನೊಣ. ಮುಸುರೆ ಎಂದರೆ ಒಂದು ನಿರ್ದಿಷ್ಟ ಆಹಾರ ಪದಾರ್ಥವಲ್ಲ, ಅದು ಹಲವು ಆಹಾರ ಪದಾರ್ಥಗಳ ಮಿಶ್ರಣ ಹಾಗು ತ್ಯಜಿಸಿದ ಆಹಾರ ಪದಾರ್ಥವೂ ಆಗಿರುತ್ತದೆ. ಅಂದರೆ ಅದು ಸೇವನೆಗೆ ಯೋಗ್ಯವಲ್ಲದ್ದು ಎಂಬ ಅರ್ಥಕೊಡುತ್ತದೆ.

ನೊಣ ಒಂದು ಜಾತಿಯ ಕೀಟ. ನೊಣದ ಗುಣಲಕ್ಷಣವನ್ನು ನೋಡುವುದಾದರೆ ಅದು ಒಂದು ವಸ್ತುವಿನಲ್ಲಿ ತೃಪ್ತಿಪಡುವುದಿಲ್ಲ, ಯೋಗ್ಯವಲ್ಲದ ಪದಾರ್ಥದ ಮೇಲೆ ಕುಳಿತು ಅನಂತರ ಪರಿಶುದ್ಧವಾದ ಪದಾರ್ಥದ ಮೇಲೆ ಕುಳಿತು ಶುದ್ಧತೆಯನ್ನು ಹಾಳುಮಾಡುತ್ತದೆ. ಹಾಗೆಯೇ ನೊಣ ಚಂಚಲತೆ ಹಾಗು ಸಂಶಯ ಮನೋಭಾವದ ಸಂಕೇತತೆಯನ್ನು ಪಡೆಯುತ್ತದೆ.

ಮುಸುರೆ ಹಾಗು ನೊಣವನ್ನು ಉಪಮೆ ನೀಡುವುದರ ಮೂಲಕ ಅಲ್ಲಮ ವಿಷಯಾಸೆಗಳನ್ನು ಮುಸುರೆಯೆಂದು ಸಾಮಾನ್ಯ ಮನುಷ್ಯನ ಮನಸ್ಸನ್ನು ನೊಣವೆಂದು ಹೇಳಿರುವುದು ಒಂದು ಆಯಾಮವಾದರೆ, ಮತ್ತೊಂದು ಆಯಾಮದಲ್ಲಿ ನೋಡುವುದಾದರೆ ಮುಸುರೆಯ ಮಡಕೆ ಮನುಷ್ಯನ ಲೋಭತನದ

ಕ್ರೋಡೀಕರಣದಂತೆ ಹಾಗು ನೊಣ ವ್ಯವಸ್ಥೆಯನ್ನು ಹಾಳುಮಾಡುವ ಆಸೆಯಂತೆ ಕಾಣುತ್ತದೆ. ಮೊದಲನೆಯ ಆಯಾಮವನ್ನು ಗಮನಿಸುವುದಾದರೆ ಮುಸುರೆ ಅಲ್ಪಾವಧಿಯದ್ದಾಗಿದ್ದು ಸ್ವಲ್ಪ ಸಮಯದ ಅನಂತರ ಕೊಳೆತು ನಾರುತ್ತದೆ. ಅಂತೆಯೇ ವಿಷಯಾಸಕ್ತಿಗಳು ಆ ಕ್ಷಣಕ್ಕೆ ಸಂತಸವನ್ನು ತಂದು ಕೊಟ್ಟರೂ ದೀರ್ಘಾವಧಿಯಲ್ಲಿ ತನ್ನ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳುತ್ತಾ, ಚಿತ್ತ ವಿಕೃತಿಗೆ ಒಳಗಾಗುವುದಲ್ಲದೆ ಅವನು ತನ್ನ ವ್ಯಕ್ತಿತ್ವ ನಾರುವಂತೆ ಮಾಡಿಕೊಳ್ಳುತ್ತಾನೆ. ಇನ್ನು ಮತ್ತೊಂದು ಆಯಾಮವನ್ನು ನೋಡುವುದಾದರೆ ಮುಸುರೆಯ ಮಡಕೆ ಮನುಷ್ಯನ ಲೋಭತನದ ಕ್ರೋಢೀಕರಣ, ಆರೋಗ್ಯ ಸಮಾಜಕ್ಕೆ ಮಾರಕವಾಗುತ್ತದೆ. ನೊಣ ಈ ಕ್ರೋಢೀಕರಣವನ್ನು ಹರಡುವ ಸಾಂಕ್ರಾಮಿಕ ರೋಗದ ಮನೋಭಾವದಂತೆ ಕಾಣುತ್ತದೆ. ಅಂದರೆ ಸಮಾಜದ ಆರೋಗ್ಯವನ್ನು ನಾಶಮಾಡುವುದಾಗಿದೆ.

**ಕಸವುಳ್ಳ ಹೊಲದಲ್ಲಿ ಪಶುಗಳು ನೆರೆದಿಪ್ಪಂತೆ:**

ಈ ಸಾಲಿನಲ್ಲಿ ಬರುವ ಕಸದ ಹೊಲ ಮತ್ತು ಪಶುವನ್ನು ನೋಡುವುದಾದರೆ ಕಸ ಎಂದರೆ ಸತ್ವವನ್ನು ಕಳೆದುಕೊಂಡ ಜೊಳ್ಳು ಹಾಗು 'ಕಳೆ' ಎಂಬ ಅರ್ಥವನ್ನು ಹೊಂದುತ್ತದೆ. (ಕಳೆ ಎಂದರೆ ಹಸಿರು ಬೆಳೆಗಳ ಮಧ್ಯೆ ಇರುವ ಅನುಪಯುಕ್ತ ಗಿಡ) ಕಳೆಯು ನೋಡಲು ಹಸಿರಾಗಿದ್ದರೂ ಯಾವುದೇ ರೀತಿಯ ಆರೋಗ್ಯಕರ ಸತ್ವವನ್ನು ಹೊಂದಿರುವುದಿಲ್ಲ. ಅಲ್ಲಮ ತನ್ನ ಈ ಉಪಮೆಯ ಸಾಲಿನಲ್ಲಿ ಹಸುವಿಗೆ ಫಲವತ್ತಾದ ಹಸಿರಿದ್ದರು ಅದು ಕಸವಿರುವ ಹೊಲವನ್ನು ಆಯ್ಕೆ ಮಾಡಿಕೊಳ್ಳುವುದು ಅದರ ಅಲ್ಪಮತಿಯ ಗುಣವನ್ನು ಸೂಚಿಸುತ್ತದೆ. ಅಲ್ಲದೆ ಒಂದು ಹಸುವು ದಾರಿತಪ್ಪಿ ನಡೆದರೆ ಎಲ್ಲಾ ಹಸುಗಳು ಅದನ್ನೇ ಹಿಂಬಾಲಿಸುವುದೇ ಹೊರೆತು ತನ್ನ ಪಥವನ್ನು ಬದಲಿಸುವುದಿಲ್ಲ. ಅಂತೆಯೇ ಮನುಷ್ಯನು ಒಳ್ಳೆಯ ಹಸಿರಾದ ಜ್ಞಾನದ ಹೊಲವನ್ನು ಸೇರದೆ ಮಾನಸಿಕ ಆರೋಗ್ಯವನ್ನು ಹಾಳುಮಾಡುವ ವಿಷಯಾಸೆಗಳಿಗೆ ಆಕರ್ಷಿತನಾಗಿ ಕಸವುಳ್ಳ ಹೊಲವನ್ನು ಸೇರುತ್ತಾನೆ ಎಂದು ಹೇಳಿದ್ದಾನೆ.

**ಅನ್ನ ಉದಕ ಹೊನ್ನು ವಸ್ತ್ರವುಳ್ಳ ದೊರೆಯ ಬಾಗಿಲಲ್ಲಿ ಬಹುಭಾಷೆಯ ಹಿರಿಯರುಗಳು ನೆರೆದುಕೊಂಡಿಪ್ಪರು:**

ದೊರೆ/ಸಿರಿವಂತರಿಂದ ದೊರೆಯುವ ಹಣ ಹಾಗು ಅಧಿಕಾರದ ಆಸೆಗಾಗಿ ಮನುಷ್ಯ ತನ್ನ ಸ್ವಾಭಿಮಾನದ ವ್ಯಕ್ತಿತ್ವವನ್ನು ಮಾರಿಕೊಂಡು ಆಶ್ರಯಿಸುತ್ತಾರೆ ಎಂದು ಅಲ್ಲಮ ತನ್ನ ನೇರ ನುಡಿಗಳಿಂದ ಹೇಳುತ್ತಾನೆ. ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಆತ್ಮಾಭಿಮಾನವಿರುತ್ತದೆ. ಅದನ್ನು ಎಂದಿಗೂ ಮತ್ತೊಬ್ಬರ ಮುಂದೆ ಬಾಗುವಂತೆ ಮಾಡಬಾರದು. ಕೇವಲ ಅಲ್ಪಾಸೆಗಾಗಿ ತಮ್ಮನ್ನು ಮಾರಿಕೊಂಡವರಂತೆ ನಡೆದುಕೊಳ್ಳುತ್ತಾರೆ. ಮೇಲಿನ ಸಾಲಿನಲ್ಲಿ ಇಂತಹ ಮನುಷ್ಯರನ್ನು 'ಬಹುಭಾಷೆಯ

ಹಿರಿಯರು' ಎಂದು ವ್ಯಂಗ್ಯ ಮಾಡಿದ್ದಾನೆ. ಸ್ವತಂತ್ರನಾಗಿ ಜೀವನ ನಡೆಸಿ ತನ್ನ ವ್ಯಕ್ತಿತ್ವವನ್ನು ತಾನು ಉಳಿಸಿಕೊಳ್ಳಬೇಕೇ ಹೋರೆತು ಅನ್ಯರ ಹಂಗಿಗೆ ತಮ್ಮ ವ್ಯಕ್ತಿತ್ವವನ್ನು ಮಾರಿಕೊಂಡಂತೆ ಜೀವನ ನಡೆಸಬಾರದು ಎಂಬುದನ್ನು ಮಾರ್ಮಿಕವಾಗಿ ಹೇಳುತ್ತಾನೆ.

**ಗುಹೇಶ್ವರಾ, ನಿಮ್ಮ ಶರಣರು ಆಶಾಪಾಶವಿಹಿತರು:**

ನಿಜವಾದ ಶರಣನು ಯಾವುದೇ ರೀತಿಯ ಆಸೆ ಆಮಿಷಕ್ಕೆ ತನ್ನನ್ನು ಒಳಗಾಗದಂತೆ ನೋಡಿಕೊಳ್ಳುತ್ತಾನೆ ಎಂದು ಅಲ್ಲಮನು ತನ್ನ ಇಷ್ಟದೈವವನ್ನು ಸಾಕ್ಷೀಕರಿಸುತ್ತಾ ಹೇಳುತ್ತಾನೆ. ಒಬ್ಬ ಶರಣನಿಗೆ ಇರಬೇಕಾದ ನಿಜವಾದ ಗುಣವನ್ನು ಈ ಸಾಲು ವ್ಯಕ್ತ ಪಡಿಸುತ್ತದೆ. ಆಸೆ ಎಂಬ ಶೂಲದಿಂದ ದೂರವಿರುತ್ತಾರೆಯೋ ಆತನೇ ಶರಣ ಎಂದು ಹೇಳುತ್ತಾನೆ.

ನೊಣ, ಪಶು ಹಾಗು ಮನುಷ್ಯನ ವ್ಯಕ್ತಿತ್ವದಲ್ಲಿನ ಲೋಪಗಳ ಬಗ್ಗೆ ತಿಳಿಸುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿವಿಧ ರೀತಿಯ ಜೀವವಿಕಾಸದ ಹಂತಗಳನ್ನು, ಆಯಾ ಹಂತಗಳಲ್ಲಿನ ಸ್ವಭಾವವನ್ನು ಉಪಮೆಯ ಮೂಲಕ ತಿಳಿಸಿದ್ದಾನೆ. ಜೀವವಿಜ್ಞಾನವು ತನ್ನ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾ ಒಂದು ಆಶ್ಚರ್ಯಕಾರಕ ಅಂಶವನ್ನು ಪ್ರಕಟಿಸುತ್ತದೆ. ಅದೇಂದರೆ ವಿವಿಧ ಹಂತಗಳಲ್ಲಿ ಜೀವವು ಸುದೀರ್ಘವಾದ ವಿಕಾಸಕ್ಕೆ ಒಳಗೊಂಡು ಅಂತಿಮವಾಗಿ ಮನುಷ್ಯ ಸ್ವರೂಪವನ್ನು ಪಡೆದಿದೆ. ಹಾಗಾಗಿ ಮನುಷ್ಯನಲ್ಲಿ ಅಮೀಬದಿಂದ ಹಿಡಿದು ಆದಿಮಾನವನವರೆಗೂ ಎಲ್ಲ ಪ್ರಾಣಿಗಳ ಸ್ವಭಾವದ ಆನುವಂಶಿಕ ಅಂಶ (ಜೀನ್ಸ್) ಇದ್ದೇ ಇರುತ್ತದೆ. ಆ ಕಾರಣದಿಂದಲೇ ಮನುಷ್ಯನ ಸ್ವಭಾವದಲ್ಲಿನ ವರ್ತನೆಯು ವಿಭಿನ್ನವಾಗಿರುತ್ತದೆ. ಯಾವ ಸಂದರ್ಭದಲ್ಲಿ ಯಾವ ಆನುವಂಶಿಕ ಅಂಶ ಪ್ರಚೋದನೆಗೆ ಒಳಗಾಗುತ್ತದೆಯೋ ಹೇಳಲು ಅಸಾಧ್ಯ ಎನ್ನುತ್ತಾರೆ.

ಈ ಜೀವವಿಜ್ಞಾನ ತತ್ತ್ವದ ಹಿನ್ನೆಲೆಯಲ್ಲಿ ಅಲ್ಲಮನ ವಚನವನ್ನು ನೋಡುವುದಾದರೆ ನೊಣದ ಸ್ವಭಾವದಲ್ಲಿನ ಚಂಚಲತೆ, ಪಶುವಿನಲ್ಲಿರುವ ಅಲ್ಪಮತಿ ಸಾಮಾನ್ಯ ಮನುಷ್ಯನಲ್ಲಿ ಪ್ರಚೋದಿತವಾಗುತ್ತಿರುತ್ತದೆ. ತನ್ನ ಕೊನೆಯ ಸಾಲಿನಲ್ಲಿ ಅಲ್ಲಮನು ಆಧ್ಯಾತ್ಮ ಚಿಂತನೆಯ ಗುರು(ಭಗವಂತ/ಗುಹೆಶ್ವರ) ನಿಮ್ಮ ಶರಣರು ಈ ಪ್ರಚೋದನೆಗೆ ಒಳಗಾಗದ ಹಂತವನ್ನು ತಲುಪಿ ಆಶಾಪಾಶವಿರಹಿತರಾಗಿದ್ದಾರೆ ಎನ್ನುತ್ತಾನೆ. ಅಂದರೆ ಅಲ್ಲಮನು 'ಶರಣತ್ವ' ಎಂಬುದು ಮನುಷ್ಯ ಜನಾಂಗದ ಔನತ್ಯದ ಹಂತ ಎಂದು ಹೇಳುವಂತಿದೆ. ಶರಣರ ಚಿಂತನೆ ಮನುಷ್ಯ ಜನಾಂಗದ ಮುಂದುವರೆದ ಹಂತ ಎಂದು ಪ್ರತಿಪಾದಿಸುವ ದೃಷ್ಟಿಯನ್ನ ಗ್ರಹಿಸಬಹುದಾಗಿದೆ.

ಅಲ್ಲಮನ ಈ ವಚನವು ಪ್ರಸ್ತುತ ಸಮಾಜಕ್ಕೆ ಹಿಡಿದ ಕೈಗನ್ನಡಿಯಂತಿದೆ. ಇಂದಿನ ಸಮಾಜದಲ್ಲಿನ ಯುವ ಪೀಳಿಗೆಯು ಮಾದಕ ವಸ್ತುಗಳಿಗೆ

ಆಕರ್ಷಿತರಾಗಿರುವುದು ನೊಣ ಮುಸುರೆಯ ಮಡಕೆಗೆ ಮುತ್ತಿಕೊಂಡಂತಿದೆ. ಎಲ್ಲಾ ತಿಳಿದಿದ್ದರು ಪ್ರತೀ ದಿನವು ಒಂದಲ್ಲ ಒಂದು ಕಡೆ ಸಾಮಾನ್ಯ ಮನುಷ್ಯನು ಹಣದ ದೊಡ್ಡ ದೊಡ್ಡ ಜಾಲಗಳಲ್ಲಿ ಸಿಲುಕಿರುವುದನ್ನು ನೋಡಿದರೆ ಅದು ಕಸವನ್ನು ಅರಸಿಕೊಂಡು ಹೋದ ಪಶುವಿನಂತೆ ಕಾಣುತ್ತದೆ. ಇಂದಿನ ರಾಜಕಾರಣಿಗಳ ಬಳಿ ಇರುವ ಜನರನ್ನು ನೋಡಿದರೆ ಅಲ್ಲಮನು ಹೇಳುವ ಬಹುಭಾಷಿಕ ಹಿರಿಯರು ಕಂಡುಬರುತ್ತಾರೆ. ನೊಣ, ಪಶು ಹಾಗು ಬಹುಭಾಷಿಕ ಹಿರಿಯರು ಸಮಾಜಕ್ಕೆ ಕೆಡುಕನ್ನು ಮಾಡುವವರ ಸಂಕೇತವಾಗಿದ್ದಾರೆ. ಈ ಕಾರಣಗಳಿಂದಲೇ ವಚನಗಳು ಎಲ್ಲ ಕಾಲಕ್ಕೂ ಪ್ರಸ್ತುತ ಎಂಬ ಪ್ರಶಂಸೆಗೆ ಪಾತ್ರವಾಗಿ, ಮಾನವ ಜನಾಂಗದ ಅತ್ಯಮೂಲ್ಯ ಜ್ಞಾನ ಭಂಢಾರ ಎನಿಸಿಕೊಳ್ಳುತ್ತದೆ.

## ಪರಾಮರ್ಶನ ಗ್ರಂಥಗಳು:


1. ಬಸವರಾಜು ಎಲ್. (ಸಂ). (1960). ಅಲ್ಲಮನ ವಚನ ಚಂದ್ರಿಕೆ. ನಳಿನಿಶಂಕರ ಪ್ರಕಾಶನ. ಮೈಸೂರು.
2. ಕಲಬುರ್ಗಿ ಎಂ. ಎಂ. (ಪ್ರ.ಸಂ). (2001). ಸಮಗ್ರ ವಚನ ಸಂಪುಟಗಳು. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
3. ಲಕ್ಕಣ್ಣ ದಂಡೇಶ. ಪಂಡಿತ ಎಸ್. ಬಸಪ್ಪ (ಸಂ). (1990). ಶಿವತತ್ವ ಚಿಂತಾಮಣಿ. ಪ್ರಾಚ್ಯವಸ್ತು ಸಂಶೋಧನಾಲಯ. ಮೈಸೂರು ವಿಶ್ವವಿದ್ಯಾಲಯ. ಮೈಸೂರು.
4. ಹಳಕಟ್ಟಿ ಫ. ಘು. (1923). ವಚನಶಾಸ್ತ್ರ ಸಾರ–1. ವೀರಶೈವ ಅಧ್ಯಯನ ಸಂಸ್ಥೆ, ಜೆ.ಟಿ.ಮಠ. ಗದಗ.
5. ಕಲಬುರ್ಗಿ ಎಂ. ಎಂ. (1970). ಶಾಸನಗಳಲ್ಲಿ ಶಿವಶರಣರು. ವೀರಶೈವ ಅಧ್ಯಯನ ಸಂಸ್ಥೆ , ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ. ಗದಗ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.